## <u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ : 2014-15ನೇ ಸಾಲಿನಲ್ಲಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಪ್ರಸ್ತಾಪಿಸಲಾದ ಹೊಸ ಕಾಂಪೋನೆಂಟ್‌ಗಳಿಗೆ ಮಂಜೂರಾತಿ ನೀಡುವ ಬಗ್ಗೆ- ಮಾರ್ಗಸೂಚಿಗಳು

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ವಾಕೈ 62 ಜಕೈಯೋ 2014 ದಿನಾಂಕ: 25.07.2014
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಕೈಮಗ್ಗ/ಟಿಪಿಬಿ-3/ನೇವಿಪ್ಯಾ/ಕೈ.ವಿ.ಯೋ/2013-14 ದಿನಾಂಕ:12.05.2014
3. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಜವಳಿ/ಟಿಐ-2/ವಿ.ಮ./2014-15 ದಿನಾಂಕ:13.05.2014

**********

<u>ಪ್ರಸ್ತಾವನೆ:</u>

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಹೊಸ 5 ಕಾಂಪೋನೆಂಟ್‌ಗಳಿಗೆ ಸರ್ಕಾರವು ಈಗಾಗಲೇ ತಾತ್ವಿಕ ಮಂಜೂರಾತಿ ನೀಡಿರುತ್ತದೆ.

1. ಕೈಮಗ್ಗ ವಿಕಾಸ ಯೋಜನೆ
2. ವಾಣಿಜ್ಯ ಬ್ಯಾಂಕುಗಳಿಂದ ಕ್ರೆಡಿಟ್ ಕಾರ್ಡ್ ಮೂಲಕ ಸಾಲ ಪಡೆದ ಕೈಮಗ್ಗ ನೇಕಾರರಿಗೆ ಬಡ್ಡಿ ಸಹಾಯಧನ
3. ವಿದ್ಯುತ್ ಮಗ್ಗಗಳ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಸುವುದು
4. ಮಗ್ಗ ಪೂರ್ವ ಸೌಲಭ್ಯಗಳ (ನಾಟಿಂಗ್ ಮೆಷಿನ್)
5. ಕೆಎಸ್‌ಟಿಐಡಿಸಿ ವತಿಯಿಂದ ವಿದ್ಯುತ್ ಮಗ್ಗ ಮೂಲ ಸೌಲಭ್ಯಗಳ ಅಭಿವೃದ್ಧಿ ಯೋಜನೆ

ಮೇಲೆ ಓದಲಾದ ಕ್ರಮಸಂಖ್ಯೆ (2) ಮತ್ತು (3)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರಗಳಲ್ಲಿ ಈ ಕೆಳಕಂಡ ಹೊಸ ಯೋಜನೆಗಳಿಗೆ ಕರಡು ಮಾರ್ಗಸೂಚಿಗಳನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

1. ಕೈಮಗ್ಗ ವಿಕಾಸ ಯೋಜನೆ
2. ವಿದ್ಯುತ್ ಮಗ್ಗಗಳ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಸುವುದು
3. ಮಗ್ಗ ಪೂರ್ವ ಸೌಲಭ್ಯಗಳ (ನಾಟಿಂಗ್ ಮೆಷಿನ್)

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### <u>ಸರ್ಕಾರಿ ಆದೇಶ ಸಂಖ್ಯೆ: ವಾಕೈ 56 ಜಕೈಯೋ 2014, ಬೆಂಗಳೂರು</u>

### <u>ದಿನಾಂಕ: 26.07.2014</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ 2014-15ನೇ ಸಾಲಿನಲ್ಲಿ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಈ ಕೆಳಕಂಡ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ರಚಿಸಿ ಅನುಬಂಧ-1, 2 ಮತ್ತು 3ರಲ್ಲಿ ನೀಡಲಾಗಿದೆ

1. ಕೈಮಗ್ಗ ವಿಕಾಸ ಯೋಜನೆ
2. ವಿದ್ಯುತ್ ಮಗ್ಗಗಳ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಸುವುದು
3. ಮಗ್ಗ ಪೂರ್ವ ಸೌಲಭ್ಯಗಳ (ನಾಟಿಂಗ್ ಮೆಷಿನ್)

ಮೇಲ್ಕಂಡ ಹೊಸ ಯೋಜನೆಗಳನ್ನು 2014-15 ನೇ ಸಾಲಿನ ಆಯವ್ಯಯದಲ್ಲಿ ಮಿತಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 664/660/662/663 ವೆಚ್ಚ ದಿನಾಂಕ:01.07.2014 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆಪಿಡಿ 22/23/24 ಎಫ್‌ಆರ್‌ಟಿ ದಿನಾಂಕ:04.06.2014 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

- ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಗದೀಶ್ ಎಸ್.)
ಪೀಠಾಧಿಕಾರಿ (ಜವಳಿ)(ಪ್ರಭಾರ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕ ಪತ್ರ: ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ,ನಿ, 6ನೇ ಮಹಡಿ, ಡಿ.ಜೆ.ಸಿ.ಕಾಂಪ್ಲೆಕ್ಸ್, ಒಕ್ಕಲಿಗರ ಭವನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು-560 027
6. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-I)
8. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
10. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ-1

**ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ "ಕೈಮಗ್ಗ ವಿಕಾಸ ಯೋಜನೆ" ಕಾಂಪೋನೆಂಟ್ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳು– ಸರ್ಕಾರದ ಆದೇಶ ಸಂಖ್ಯೆ:ವಾಕೈ 56 ಜಕೈಯೋ 2014 ದಿನಾಂಕ:26-07-2014**

ರಾಜ್ಯದ ಕೈಮಗ್ಗ ವಲಯದಲ್ಲಿ ಕೈಮಗ್ಗಗಳು ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನಲೆಯಲ್ಲಿ ಹಾಲಿ ಇರುವ ನೇಕಾರರು ಕೈಮಗ್ಗ ನೇಯ್ಗೆ ವೃತ್ತಿಯನ್ನು ಮುಂದುವರಿಸಿ ಅಭಿವೃದ್ಧಿ ಪಡಿಸಿಕೊಳ್ಳಲು ಹಾಗೂ ಯುವ ನೇಕಾರರನ್ನು ಕೈಮಗ್ಗ ನೇಯ್ಗೆ ವೃತ್ತಿಯೆಡೆಗೆ ಆಕರ್ಷಿಸುವ ಉದ್ದೇಶದಿಂದ ಹತ್ತಿ/ರೇಷ್ಮೆ/ಉಣ್ಣೆ ಕ್ಷೇತ್ರದಲ್ಲಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50 ರಷ್ಟು ಸಹಾಯಧನವನ್ನು ಯೋಜನೆಯಡಿ ಒದಗಿಸಲು ಉದ್ದೇಶಿಸಲಾಗಿದೆ.

### ಫಲಾನುಭವಿ ಅರ್ಹತೆ:

1. ಸ್ವಂತ ಮನೆ/ಬಾಡಿಗೆ ಮನೆಯಲ್ಲಿ ವಾಸವಿರುವ ಕೈಮಗ್ಗ ನೇಕಾರ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ನೇಕಾರರು, ಕೈಮಗ್ಗ ಸಂಘ/ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿರುವ ನೇಕಾರರು, ಕರ್ನಾಟಕ ಅಭಿವೃದ್ಧಿ ನಿಗಮದಲ್ಲಿ ಸದಸ್ಯತ್ವ ಹೊಂದಿರುವ ನೇಕಾರರು ಹಾಗೂ ವೈಯಕ್ತಿಕ ನೇಕಾರರು ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ.
2. ಹಾಲಿ ಕೈಮಗ್ಗ ನೇಯ್ಗೆ ವೃತ್ತಿಯನ್ನು ಮಾಡುವ ಪಾರಂಪರಿಕ ನೇಕಾರರು ನೇಕಾರರ ಗುರುತಿನ ಚೀಟಿಯನ್ನು ಹೊಂದಿರಬೇಕು.
3. ಹೊಸದಾಗಿ ನೇಯ್ಗೆ ವೃತ್ತಿ ಪ್ರಾರಂಭಿಸುವ ಯುವಕ/ಯುವತಿಯರು ಸರ್ಕಾರದ ಯಾವುದಾದರೊಂದು ಯೋಜನೆಯಡಿ ಕೈಮಗ್ಗ ನೇಯ್ಗೆಯಲ್ಲಿ ತರಬೇತಿ ಪಡೆದಿರಬೇಕು ಹಾಗೂ ಈ ಬಗ್ಗೆ ಸಂಬಂಧಪಟ್ಟ ಸರ್ಟಿಫಿಕೇಟನ್ನು ಹೊಂದಿರಬೇಕು.
4. ವಾರ್ಪಿಂಗ್ ಯಂತ್ರ ಖರೀದಿಸುವ ಫಲಾನುಭವಿಗಳು ವಾರ್ಪಿಂಗ್‌ನಲ್ಲಿ ಅನುಭವ ಹೊಂದಿರುವ ಬಗ್ಗೆ ಸೂಕ್ತ ಪ್ರಮಾಣ ಪತ್ರವನ್ನು ಹೊಂದಿರಬೇಕು ಹಾಗೂ ವಾರ್ಪಿಂಗ್ ಯಂತ್ರವನ್ನು ಇನ್‌ಸ್ಟಾಲ್ ಮಾಡಲು ಅಗತ್ಯ ಸ್ಥಳಾವಕಾಶವನ್ನು ಹೊಂದಿರಬೇಕು.

### ಯೋಜನೆಯಡಿ ದೊರೆಯುವ ಅನುದಾನದ ವಿವರ

ಫಲಾನುಭವಿಗಳು ಹೊಸ ಕೈಮಗ್ಗ/ಸಲಕರಣೆ/ಯಂತ್ರೋಪಕರಣಗಳ ಘಟಕ ವೆಚ್ಚದ ಶೇಕಡ 50 ರಷ್ಟು ಹಣವನ್ನು ಸಹಾಯಧನವಾಗಿ ಪಡೆಯಬಹುದಾಗಿದೆ. ಉಳಿಕೆ ಶೇಕಡ 50 ರಷ್ಟು ಹಣವನ್ನು ಫಲಾನುಭವಿಗಳು ಆರ್ಥಿಕ ಸಂಸ್ಥೆ/ಬ್ಯಾಂಕ್ ಸಾಲದಿಂದ ಅಥವಾ ಫಲಾನುಭವಿಯ ಸ್ವಂತ ಬಂಡವಾಳದ ಮೂಲಕ ಭರಿಸಬಹುದಾಗಿರುತ್ತದೆ.

ಕೈಮಗ್ಗ ಮತ್ತು ಯಂತ್ರೋಪಕರಣಗಳ ಘಟಕ ವೆಚ್ಚದ ವಿವರಗಳು ಕೆಳಕಂಡಂತಿವೆ.

| ಕ್ರಸಂ | ವಿವರ | ಘಟಕ ವೆಚ್ಚ | ಸರ್ಕಾರದ ಸಹಾಯಧನ | ಬ್ಯಾಂಕ್ ಸಾಲ /ಸ್ವಂತ ಬಂಡವಾಳ |
|---|---|---|---|---|
| 1. | ಉಣ್ಣೆ ಕೈಮಗ್ಗ ಸಲಕರಣೆಗಳೊಂದಿಗೆ | 20,000 | 10,000 | 10,000 |
| 2. | ಹತ್ತಿ ಸಾದ ಕೈಮಗ್ಗ ಸಲಕರಣೆಗಳೊಂದಿಗೆ | 20,000 | 10,000 | 10,000 |
| 3. | ಹತ್ತಿ ಸೀರೆ ಕುಣಿಮಗ್ಗ ಸಲಕರಣೆಗಳೊಂದಿಗೆ | 25,000 | 12,500 | 12,500 |
| 4. | ಫ್ರೇಮ್ ಲೂಮ್ 400 ಹುಕ್ಸ್ ಜಕಾರ್ಡ್ ಹಾರ್ನೆಸ್, ನ್ಯೂಮ್ಯಾಟಿಕ್ ಸಿಸ್ಟಮ್ ಮತ್ತು ಎಲ್ಲಾ ಸಲಕರಣೆಗಳೊಂದಿಗೆ | 40,000 | 20,000 | 20,000 |
| 5. | ರೇಷ್ಮೆ ಸಾದ ಕೈಮಗ್ಗ (ಕುಣಿಮಗ್ಗ) ಸಲಕರಣೆಗಳೊಂದಿಗೆ | 20,000 | 10,000 | 10,000 |
| 6. | ರೇಷ್ಮೆ ಸೀರೆ ಕೈಮಗ್ಗ ಡಾಬಿ, ಜಕಾರ್ಡ್, ಹಾರ್ನೆಸ್, ನ್ಯೂಮ್ಯಾಟಿಕ್ ಸಿಸ್ಟಮ್ ಮತ್ತು ಎಲ್ಲಾ ಅಗತ್ಯ ಸಲಕರಣೆಗಳೊಂದಿಗೆ | 40,000 | 20,000 | 20,000 |
| 7. | ಸೆಕ್ಷನಲ್ ವಾರ್ಪಿಂಗ್ ಯಂತ್ರ, ವಿ ಟೈಪ್ 400 ಬಾಬಿನ್ ಕ್ರೀಲ್‌ನೊಂದಿಗೆ | 35,000 | 17,500 | 17,500 |
| 8. | ಡ್ರಮ್ ಟೈಪ್ ವಾರ್ಪಿಂಗ್ ಯಂತ್ರ 400 ಬಾಬಿನ್ ಕ್ರೀಲ್‌ನೊಂದಿಗೆ | 40,000 | 20,000 | 20,000 |

ಯೋಜನೆಯಡಿ ಸೌಲಭ್ಯ ಪಡೆಯುವ ನೇಕಾರರು ನೇಯ್ಗೆ ಚಟುವಟಿಕೆಗೆ ಅಗತ್ಯ ದುಡಿಯುವ ಬಂಡವಾಳವನ್ನು ನೇಕಾರರ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಬ್ಯಾಂಕುಗಳಿಂದ ಪಡೆಯಬಹುದಾಗಿರುತ್ತದೆ.

## ಯೋಜನೆಯ ಅನುಷ್ಠಾನ

ಕೈಮಗ್ಗ ವಿಕಾಸ ಯೋಜನೆಯಡಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಅರ್ಹ ಫಲಾನುಭವಿಗಳನ್ನು ಗುರುತಿಸಿ ನೇಕಾರರ ಪ್ರಸ್ತಾವನೆಗಳನ್ನು ತಮ್ಮ ಪರಿಶೀಲನೆ ಹಾಗೂ ಶಿಫಾರಸ್ಸಿನೊಂದಿಗೆ, ಕೆಳಕಂಡ ದಾಖಲಾತಿಗಳೊಂದಿಗೆ ಜವಳಿ ಅಭಿವೃದ್ಧಿ ಆಯುಕ್ತರಿಗೆ ಮಂಜೂರಾತಿಗಾಗಿ ಸಲ್ಲಿಸತಕ್ಕದ್ದು.

1. ನಿಗದಿತ ನಮೂನೆಯಲ್ಲಿ ಫಲಾನುಭವಿಯ ಅರ್ಜಿ.
2. ನೇಕಾರರ ಗುರುತಿನ ಚೀಟಿಯ ದೃಢೀಕೃತ ಪ್ರತಿ.
3. ಫಲಾನುಭವಿಯ ಕೈಮಗ್ಗ ನೇಯ್ಗೆ ತರಬೇತಿ ಪಡೆದಿರುವ ಬಗ್ಗೆ ಸರ್ಟಿಫಿಕೇಟ್‌ನ ದೃಢೀಕೃತ ಪ್ರತಿ.
4. ಘಟಕ ವೆಚ್ಚದ ಶೇಕಡ 50 ರಷ್ಟು ಹಣವನ್ನು ಆರ್ಥಿಕ ಸಂಸ್ಥೆ/ಬ್ಯಾಂಕ್ ಸಾಲ/ಸ್ವಂತ ಬಂಡವಾಳದಿಂದ ಭರಿಸುವ ಬಗ್ಗೆ ಸಾಲ ಮಂಜೂರಾತಿ ಪತ್ರ/ಒಪ್ಪಿಗೆ ಪತ್ರ.

ಜಿಲ್ಲಾ ಮಟ್ಟದ ಅಧಿಕಾರಿಗಳು ಶಿಫಾರಸ್ಸು ಮಾಡಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಜವಳಿ ಅಭಿವೃದ್ಧಿ ಆಯುಕ್ತರ ಕಛೇರಿಯಲ್ಲಿ ಪರಿಶೀಲಿಸಿ, ಅನುದಾನ ಲಭ್ಯತೆ ಆಧರಿಸಿ ಸಹಾಯಧನವನ್ನು ಮಂಜೂರು ಮಾಡಿ ಬಿಡುಗಡೆ ಮಾಡುವುದು.

ಜಿಲ್ಲಾ ಮಟ್ಟದ ಅಧಿಕಾರಿಗಳು ಯೋಜನೆಯಡಿ ಮಂಜೂರಾದ ಅನುದಾನವನ್ನು ಜಂಟಿ ಖಾತೆಯಲ್ಲಿರಿಸಿ ಫಲಾನುಭವಿಗಳು ಹೊಸ ಕೈಮಗ್ಗ/ಸಲಕರಣೆಗಳು/ಯಂತ್ರೋಪಕರಣವನ್ನು ಖರೀದಿಸುವ ಸಂಬಂಧ ಖರೀದಿ ನಿಯಮಗಳನ್ನು ಪಾಲಿಸಿರುವುದನ್ನು ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ಮಂಜೂರಾದ ಸಹಾಯಧನದಲ್ಲಿ ಶೇಕಡ 50 ರಷ್ಟನ್ನು ಸಂಬಂಧಪಟ್ಟ ಫಲಾನುಭವಿಗೆ ಚೆಕ್ ಮೂಲಕ ಬಿಡುಗಡೆ ಮಾಡುವುದು.

ಸಂಬಂಧಪಟ್ಟ ಫಲಾನುಭವಿಗಳು ಕೈಮಗ್ಗ/ಸಲಕರಣೆ/ಯಂತ್ರೋಪಕರಣಗಳನ್ನು ಖರೀದಿಸಿರುವ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಖರೀದಿ ಬಿಲ್ ಮತ್ತು ಫೋಟೋ ಪಡೆದು ಉಳಿದ ಶೇಕಡ 50 ರಷ್ಟು ಸಹಾಯಧನವನ್ನು ಚೆಕ್ ಮೂಲಕ ಬಿಡುಗಡೆ ಮಾಡಬಹುದು.

ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಯೋಜನೆಯ ಅನುಷ್ಠಾನ ಮತ್ತು ಯೋಜನೆಯ ಉಸ್ತುವಾರಿ ಅಧಿಕಾರಿಗಳಾಗಿರುತ್ತಾರೆ.

ಎಸ್. ಜಗದೀಶ್
(ಎಸ್.ಜಗದೀಶ್),
ಪೀಠಾಧಿಕಾರಿ (ಜವಳಿ) (ಪ್ರಭಾರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

...ಕೇಜ್
...ರಚಿಸಿ

...ಅಳವಡಿಸುವುದು